



ದಕ್ಷಿಣ ಆಫ್ರಿಕಾದಲ್ಲಿ ಸೇನಾ ಕಾರ್ಯದ ನಿಮಿತ್ತ ವಿಮಾನದಿಂದ ಪ್ಯಾರಾಚೂಟ್ ಬಳಸಿ ಕೆಳಗೆ ಹಾರಿದ್ದರು. ಈ ಸಾಹಸದಲ್ಲಿ ಅವರ ಬೆನ್ನುಮೂಳೆ ಮೂರು ಕಡೆ ಸೀಳಿತ್ತು. ದುರಂತದಿಂದಾಗಿ, ಇನ್ನುಮುಂದೆ ನಡೆಯುವುದೂ ಕಷ್ಟ ಎಂದವರು ಭಾವಿಸಿದ್ದರು. ಆದರೆ, ಅಪಘಾತ ಅವರನ್ನು ಧೃತಿಗೆಡಿಸಲಿಲ್ಲ. ಒಂದೇ ವರ್ಷದಲ್ಲಿ ಚೇತರಿಸಿಕೊಂಡು, ನೇಪಾಳದಲ್ಲಿರುವ 22 ಸಾವಿರ ಅಡಿ ಎತ್ತರದ ಅಮ ಡಬ್ಲಾಮ್ ಪರ್ವತವನ್ನು ಏರಿ ಮತ್ತೆ ಹುಬ್ಬೇರಿಸಿದರು.

## ಗಿನ್ನಿಸ್ ದಾಖಲೆ

23 ವರ್ಷದವರಾಗಿದ್ದಾಗ ವಿಶ್ವದ ಅತ್ಯಂತ ಎತ್ತರದ ಮೌಂಟ್ ಎವರೆಸ್ಟ್ ಪರ್ವತವನ್ನು ಏರಿ, ಆ ಸಾಧನೆ ಮಾಡಿದ ಅತಿ ಕಿರಿಯ ಬ್ರಿಟಿಷ್ ಪ್ರಜೆ ಎಂದು ಗಿನ್ನಿಸ್ ವಿಶ್ವದಾಖಲೆ ಪುಸ್ತಕದಲ್ಲಿ ತಮ್ಮ ಹೆಸರು ಬರೆಸಿಕೊಂಡರು. ಇದಷ್ಟೇ ಅಲ್ಲದೆ, –60 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶವಿರುವ ಹಾಗೂ ಆಮ್ಲಜನಕ ಪ್ರಮಾಣ ಕಡಿಮೆ ಇರುವಂತಹ ಹಿಮಾಲಯ ಪರ್ವತಗಳ ಮೇಲೆ ಸುಮಾರು 29 ಸಾವಿರ ಅಡಿ ಎತ್ತರದಲ್ಲಿ ಪ್ಯಾರಾಚೂಟ್‌ಗಳ ನೆರವಿನಿಂದ ಹಾರಾಟ ನಡೆಸಿ ಸಾಹಸಪ್ರಿಯರ ಗಮನ ಸೆಳೆದಿದ್ದರು.

ಬೇರ್ ಅವರ ಸಾಮಾಜಿಕ ಕಳಕಳಿಯ ಕುರಿತೂ ಕಥೆಗಳಿವೆ. 'ರಾಯಲ್ ನ್ಯಾಷನಲ್ ಲೈಫ್‌ಬೋಟ್ ಇನ್‌ಸ್ಟಿಟ್ಯೂಷನ್' ಅಭಿವೃದ್ಧಿಗೆ ನಿಧಿ ಸಂಗ್ರಹಿಸಲು ಜೆಟ್ ಸ್ಕೈಗಳಲ್ಲಿ ಬ್ರಿಟಿಷ್ ದ್ವೀಪಗಳಲ್ಲಿ ಕೆಲಸ ಮಾಡಿದ್ದಾರೆ. ಪರ್ವತಾರೋಹಣದ ಅಪಘಾತದಲ್ಲಿ ಕಾಲು ಕಳೆದುಕೊಂಡ ಸ್ನೇಹಿತನಿಗಾಗಿ ಲಂಡನ್‌ನ ಥೇಮ್ಸ್ ನದಿಯಲ್ಲಿ ಬೆತ್ತಲೆಯಾಗಿ ದೋಣಿ ಚಲಾಯಿಸಿ ನಿಧಿ ಸಂಗ್ರಹಿಸಿದ್ದರು. ಸಾಹಸ ಯಾನ ಕೈಗೊಳ್ಳುವವರಿಗೆ ಸಲಹೆ ನೀಡುವವರಾಗಿಯೂ ಅವರು ಹಲವು ಕಡೆ ಕೆಲಸ ಮಾಡಿದ್ದಾರೆ.

ವಿಶ್ವದಲ್ಲೇ ಅತಿ ಎತ್ತರದ ಪ್ರದೇಶದಲ್ಲಿ ಡಿನ್ನರ್ ಪಾರ್ಟಿ ಆಚರಿಸಿದ ವ್ಯಕ್ತಿಯಾಗಿ ದಾಖಲೆ ನಿರ್ಮಿಸಲು, ಬಿಸಿಗಾಳಿ ಬಲೂನ್ ನೆರವಿನಿಂದ 25 ಸಾವಿರ ಅಡಿ ಎತ್ತರದಲ್ಲಿ ಆಹಾರ ಸೇವಿಸಿ ದಾಖಲೆ ನಿರ್ಮಿಸಿದ ಖ್ಯಾತಿಯೂ ಅವರಿಗಿದೆ.

ತಮ್ಮ ಸಾಹಸ ಪ್ರವೃತ್ತಿಯಿಂದಾಗಿಯೇ ಬ್ರಿಟನ್‌ನ ರಾಯಲ್ ನೇವಿಯಲ್ಲಿ ಲೆಫ್ಟಿನೆಂಟ್ ಕಮಾಂಡರ್ ಆಗಿ ಕೆಲಸ ಮಾಡುವ ಅವಕಾಶ ಪಡೆದ ಬೇರ್, ಅನೇಕ ಗೌರವ ಪ್ರಶಸ್ತಿಗಳನ್ನೂ ಮುಡಿಗೇರಿಸಿಕೊಂಡಿದ್ದಾರೆ. ಸಾಹಸ ಪ್ರವೃತ್ತಿಗಳ ಬಗ್ಗೆ ಬೆಳಕು ಚೆಲ್ಲುವ ಹಲವು ಪುಸ್ತಕಗಳನ್ನೂ ಪ್ರಕಟಿಸಿದ್ದಾರೆ. 'ಒಂಟಿಯಾಗಿ ಇರುವುದು ಹೇಗೆ' ಎಂಬ ವಿಶಿಷ್ಟ ಪುಸ್ತಕ ಅವುಗಳಲ್ಲಿ ಒಂದು.

ಬೇರ್ ಅವರ ಸಂಗಾತಿಯ ಹೆಸರು ಸಾರಾ. ಈ ದಂಪತಿಗೆ ಜೆಸ್ಸಿ, ಮರ್ಮಡ್ಯೂಕ್ ಗ್ರಿಲ್ಸ್ ಹಾಗೂ ಹಕಲ್‌ಬೆರ್ರಿ ಹೆಸರಿನ ಮೂವರು ಮಕ್ಕಳಿದ್ದಾರೆ.

## ಮ್ಯಾನ್ ವರ್ಸಸ್ ವೈಲ್ಡ್

2006ರಲ್ಲಿ 'ಮ್ಯಾನ್ ವರ್ಸಸ್ ವೈಲ್ಡ್' ಕಾರ್ಯಕ್ರಮ ರೂಪಿಸುವುದಾಗಿ 'ಡಿಸ್ಕವರಿ ಚಾನೆಲ್' ಸಂಪರ್ಕಿಸಿದ ಬೇರ್, ಚಾನಲ್‌ನ ಮನವೊಲಿಸುವುದರಲ್ಲಿ ಯಶಸ್ವಿಯೂ ಆದರು. ಈ ಕಾರ್ಯಕ್ರಮಕ್ಕೆ ಮೆರುಗು ನೀಡಲು ಖ್ಯಾತನಾಮರೊಂದಿಗೆ ಕಾಡು ಸುತ್ತುವ ಪರಿಕಲ್ಪನೆಯೊಂದಿಗೆ ಅವರು ತಮ್ಮ ಜನಪ್ರಿಯತೆಯನ್ನು ಹೆಚ್ಚಿಸಿಕೊಳ್ಳುತ್ತಲೇ ಹೋಗುತ್ತಿದ್ದಾರೆ.

ಅಮೆರಿಕದ ಮಾಜಿ ಅಧ್ಯಕ್ಷ ಬರಾಕ್ ಒಬಾಮಾ, ಪ್ರಧಾನಿ ನರೇಂದ್ರ ಮೋದಿ, ಸೂಪರ್‌ಸ್ಟಾರ್ ರಜನಿಕಾಂತ್, ಬಾಲಿವುಡ್‌ನ ಅಕ್ಷಯ್‌ಕುಮಾರ್ ಸೇರಿದಂತೆ ಹಲವು ಖ್ಯಾತನಾಮರೊಂದಿಗೆ ಅವರು ದಟ್ಟ ಅರಣ್ಯಗಳಲ್ಲಿ ಹೆಜ್ಜೆ ಹಾಕಿದ್ದಾರೆ. ಈವರೆಗೆ ಏಳು ಆವೃತ್ತಿಗಳಲ್ಲಿ ಕಾರ್ಯಕ್ರಮಗಳು ಪ್ರಸಾರವಾಗಿವೆ. ಬಂಡೀಪುರದ ಹುಲಿ ಸಂರಕ್ಷಿತ ಪ್ರದೇಶದಲ್ಲಿ ರಜನಿ ಮತ್ತು ಅಕ್ಷಯ್ ಅವರೊಂದಿಗೆ ಬೇರ್ ಅವರು ಇತ್ತೀಚೆಗಷ್ಟೇ ಚಿತ್ರೀಕರಣ ನಡೆಸಿದ್ದರು.

ಸೆಲೆಬ್ರಿಟಿಗಳೊಂದಿಗೆ ಕಾಡು ಸುತ್ತುವ ಬೇರ್ ಕಾರ್ಯಕ್ರಮಗಳ ಆಶಯ ಅಪ್ರಾಮಾಣಿಕವಾದುದು; ಅದೊಂದು ವ್ಯಾಪಾರಿ ತಂತ್ರವೇ ಹೊರತು ವನ್ಯಜೀವಿಗಳ ಕಾಳಜಿಯನ್ನೇನೂ ಹೊಂದಿಲ್ಲ ಎನ್ನುವ ಆರೋಪಗಳನ್ನೂ ಅವರು ಎದುರಿಸುತ್ತಿದ್ದಾರೆ.

